**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಓ.ಎಸ್.293/2014**

ಪಿ.ಡಬ್ಲ್ಯೂ- 1 - **ಹಾಜೀರ ಬೇಗಂ**

**ಪ್ರಮಾಣೀಕರಿಸಿದ ದಿನಾಂಕ: 20.07.2024**

**ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ವಕೀಲರಿಂದ : -**

ನನ್ನ ವಾದಪತ್ರದಲ್ಲಿ ದಾವಾ ಸ್ವತ್ತುಗಳನ್ನು ಎರಡು ಷೆಡ್ಯೂಲ್ ಗಳಾಗಿ ತೋರಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳ ಸರ್ವೆ ಸಂಖ್ಯೆ, ವಿಸ್ತೀರ್ಣ ನನಗೆ ಗೊತ್ತಿಲ್ಲ. ನಾನು ವಾದಪತ್ರವನ್ನು ಮತ್ತು ಪ್ರಮಾಣ ಪತ್ರವನ್ನು ತಯಾರಿಸಲು ಮಾಹಿತಿ ನೀಡಿರುವುದಿಲ್ಲ. ವಾದಪತ್ರದಲ್ಲಿ ಹಾಗೂ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಷಯಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ದಾವಾ ಸ್ವತ್ತಿನ ಒಂದು ಭಾಗದಲ್ಲಿ 1, 5, 6 ನೇ ಪ್ರತಿವಾದಿಗಳು ಸ್ವಾಧೀನದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು, ಅವರು ಇರುತ್ತಾರೆ ಎಂದು ಗೊತ್ತು, ಆದರೆ ಎಲ್ಲಿರುತ್ತಾರೆ ಎಂದು ಗೊತ್ತಿಲ್ಲ ಎನ್ನುತ್ತಾರೆ. ದಾವಾ ಸ್ವತ್ತುಗಳನ್ನು ನನ್ನ ಚಿಕ್ಕ ವಯಸ್ಸಿನಲ್ಲಿ ನೋಡಿರುತ್ತೇನೆ. ದಾವಾ ಸ್ವತ್ತಿನಲ್ಲಿ 5 ಮತ್ತು 6 ನೇ ಪ್ರತಿವಾದಿಗಳು ಗಿಡಗಳನ್ನು ಬೆಳೆಸಿರುತ್ತಾರೆ. ಸದರಿ ಪ್ರತಿವಾದಿಗಳೇ ಮರಗಳನ್ನು ಬೆಳೆಸಿ ಸ್ವಾಧೀನದಲ್ಲಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ದಾಖಲೆಗಳು 1, 5 ಮತ್ತು 6 ನೇ ಪ್ರತಿವಾದಿಗಳ ಹೆಸರಿನಲ್ಲಿ ಮಾಡಿಕೊಂಡಿರುತ್ತಾರೆ ಎಂದು ಗೊತ್ತಿದ್ದು ದಾಖಲೆಗಳ ಬಗ್ಗೆ ಗೊತ್ತಿಲ್ಲ. ಸರ್ಕಾರಕ್ಕೆ ಕಂದಾಯವನ್ನು ಸಹ ಅವರೇ ಕಟ್ಟುತ್ತಿದ್ದಾರೆ ಎಂದರೆ ಸರಿ.

ನಿ.ಪಿ.13 ನ್ನು ಮಾಡಿಕೊಂಡಾಗ ನನಗೆ ಹಣ ನೀಡಿರುವುದಿಲ್ಲ. ನನಗೆ ಸಹಿ ಮಾಡಲು ಹೇಳಿದ ಕಾರಣ ನಿ.ಪಿ.13 ಕ್ಕೆ ಸಹಿ ಮಾಡಿರುತ್ತೇನೆ. ನನಗೆ ಸಹಿ ಮಾಡಿಸಿಕೊಂಡ 1-2 ವರ್ಷಗಳ ನಂತರ ನನಗೆ ಮೋಸ ಮಾಡಿರುವ ಬಗ್ಗೆ ನನಗೆ ತಿಳಿದಿರುತ್ತದೆ. ನನಗೆ ಮೋಸ ಮಾಡಿದ ಬಗ್ಗೆ ತಿಳಿದ ನಂತರ ಪೊಲೀಸರಿಗೆ ದೂರು ನೀಡಿರುವುದಿಲ್ಲ. ನಂತರ ನಾನು ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತೇನೆ. ತದನಂತರ ನಾನು ಸದರಿ ವಿಷಯದ ಬಗ್ಗೆ ನನ್ನ ವಕೀಲರಿಗೆ ತಿಳಿಸಿದ್ದು, ಅವರು ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತಾರೆ. ನನ್ನ ಸಹೋದರರು ನಿ.ಪಿ.13 ನ್ನು ನನಗೆ ವಿಷಯವನ್ನು ತಿಳಿಸಿ ಹಣ ನೀಡಿ ನಿ.ಪಿ.13 ಕ್ಕೆ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ಹಾಗೂ 1 ರಿಂದ 8 ನೇ ವಾದಿಗಳು ಸೇರಿ ಹಣ ಪಡೆದು ನಿ.ಪಿ.13 ಕ್ಕೆ ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿ.ಪಿ.13 ನ್ನು ಬರೆಸಿಕೊಂಡ ನಂತರ 1, 5, 6 ನೇ ಪ್ರತಿವಾದಿಗಳು ತಮ್ಮ ಹೆಸರಿನಲ್ಲಿ

ದಾವಾ ಅನುಸೂಚಿ ಎ ಸ್ವತ್ತಿಗೆ ಖಾತೆ ಮಾಡಿಕೊಂಡು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಹಣವನ್ನು ಪಡೆದರೂ ಸಹ ಹೆಚ್ಚಿನ ಆಸ್ತಿಯನ್ನು ಪಡೆಯಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.13 ನ್ನು ಬರೆದುಕೊಟ್ಟಿದ್ದಕ್ಕಾಗಿ ದಾವಾ ಅನುಸೂಚಿ ಎ ಸ್ವತ್ತಿನಲ್ಲಿ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**